# ಅಜರುದ್ದೀನ್ ಮುಂದೇನು?



ಹನ್ನೆರಡು ವರ್ಷಗಳ ಕಾಲ ಕ್ರಿಕೆಟ್‌ನಿಂದ ಎಲ್ಲ ರೀತಿಯಲ್ಲೂ ದೂರವುಳಿದಿದ್ದ ಅಜರುದ್ದೀನ್ ಇದೀಗ ನಿರಾಳರಾಗಿದ್ದಾರೆ. ಆಜೀವ ನಿಷೇಧ ಶಿಕ್ಷೆಯಿಂದ ಹೊರಬಂದಿರುವ ಅವರು ಮತ್ತೆ ಕ್ರಿಕೆಟ್ ಜೊತೆಗೆ ನಂಟು ಬೆಳೆಸುವರೇ ಎಂಬುದನ್ನು ಕಾದು ನೋಡಬೇಕು.

■ ಮಹಮ್ಮದ್ ನೂಮಾನ್

ಸುಮಾರು ಒಂದೂವರೆ ದಶಕಗಳ ಕಾಲ ಭಾರತದ ಕ್ರಿಕೆಟ್‌ನಲ್ಲಿ ಮೆರೆದಾಟ ನಡೆಸಿ, ವೃತ್ತಿಜೀವನದ ಸಂಧ್ಯಾಕಾಲದಲ್ಲಿ ಎಲ್ಲರ ತೆಗಳಿಕೆಗೆ ಗುರಿಯಾಗಿದ್ದ ವ್ಯಕ್ತಿ ಮೊಹಮ್ಮದ್ ಅಜರುದ್ದೀನ್. ಮೋಸದಾಟದಲ್ಲಿ ಭಾಗಿಯಾಗಿ ಆಜೀವ ನಿಷೇಧ ಶಿಕ್ಷೆಗೆ ಗುರಿಯಾಗಿದ್ದ ಅಭಿಮಾನಿಗಳ ನೆಚ್ಚಿನ 'ಅಜ್ಜು ಭಾಯ್' ಕಳೆದ ಹನ್ನೆರಡು ವರ್ಷಗಳ ಕಾಲ ಕ್ರಿಕೆಟ್ ಜೊತೆಗಿನ ಎಲ್ಲ ರೀತಿಯ ಸಂಬಂಧಗಳನ್ನು ಕಡಿದುಕೊಂಡಿದ್ದರು.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಳೆದ ವಾರ ಅಲ್ಪ ನಿರಾಳರಾದರು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಹೇರಿದ್ದ ಆಜೀವ ನಿಷೇಧ ಶಿಕ್ಷೆಯನ್ನು ಆಂಧ್ರ ಪ್ರದೇಶ ಹೈಕೋರ್ಟ್ ತೆರವುಗೊಳಿಸಿರುವುದು ಅವರ ಜೀವನದಲ್ಲಿ ಹೊಸ ಬೆಳಕು ಮೂಡಿಸಿದೆ.

49ರ ಹರೆಯದ ಅಜರ್ ಮತ್ತೆ ಸ್ಪರ್ಧಾತ್ಮಕ ಕ್ರಿಕೆಟ್ ಆಡಲು ಸಾಧ್ಯವಿಲ್ಲ. ಆದರೆ ಎಳೆ ಹರೆಯದಿಂದಲೇ ಉಸಿರನ್ನಾಗಿಸಿಕೊಂಡಿದ್ದ ಕ್ರಿಕೆಟ್ ಜೊತೆ ಪುನಃ ನಂಟು ಬೆಳೆಸಿಕೊಳ್ಳಲು ಅವರಿಗೆ ಈ ತೀರ್ಪು ಅನುವು ಮಾಡಿಕೊಟ್ಟಿದೆ.

ನಿಷೇಧ ಶಿಕ್ಷೆ ಇದ್ದ ಕಾರಣ ಕೋಚಿಂಗ್ ಮತ್ತು ವೀಕ್ಷಕ ವಿವರಣೆ ಒಳಗೊಂಡಂತೆ ಕ್ರಿಕೆಟ್‌ಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಿಂದ ದೂರವಿರುವುದು ಅನಿವಾರ್ಯವಾಗಿತ್ತು. ಅಷ್ಟು ಮಾತ್ರವಲ್ಲ, ಅಂತರರಾಷ್ಟ್ರೀಯ ಪಂದ್ಯಗಳು ನಡೆಯುವ ತಾಣಕ್ಕೆ ಅವರು ಪ್ರವೇಶಿಸುವಂತಿರಲಿಲ್ಲ. ಇದರಿಂದ ಅನ್ಯಮಾರ್ಗವಿಲ್ಲದೆ ರಾಜಕೀಯಕ್ಕೆ ಧುಮುಕಿದ್ದರು. ಸಂಸತ್‌ಗೆ ಆಯ್ಕೆಯಾಗುವಲ್ಲೂ ಯಶಸ್ವಿಯಾಗಿದ್ದರು.

ಅಜರ್ ಒಂದು ಕಾಲದಲ್ಲಿ ಕಲಾತ್ಮಕ ಬ್ಯಾಟಿಂಗ್‌ನಿಂದ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದರು. ಮಣಿಕಟ್ಟಿನ ಅದ್ಭುತ ಚಲನೆಯ ಮೂಲಕ ಬ್ಯಾಟಿಂಗ್‌ಗೆ ಹೊಸ ದಿಶೆಯನ್ನು ತೋರಿಸಿಕೊಟ್ಟಿದ್ದರು. ಅವರ ಕವರ್ ಡ್ರೈವ್‌ಗಳು ಕ್ರಿಕೆಟ್ ಅಭಿಮಾನಿಗಳ ರೋಮಾಂಚನಕ್ಕೆ ಕಾರಣವಾಗುತ್ತಿತ್ತು.

ಅಜರ್ ಕ್ರಿಕೆಟ್‌ನಿಂದ ದೂರವಾಗಿ 12 ವರ್ಷಗಳು ಕಳೆದಿವೆ. ಆದರೆ ಕಲಾತ್ಮಕ ಬ್ಯಾಟಿಂಗ್‌ನಲ್ಲಿ ಅವರಿಗೆ ಸರಿಸಾಟಿಯಾಗಿ ನಿಲ್ಲುವಂತಹ ಇನ್ನೊಬ್ಬ ಆಟಗಾರ ಭಾರತಕ್ಕೆ ಲಭಿಸಿಲ್ಲ. 1984-85 ರಲ್ಲಿ ವಿಶ್ವ ಕ್ರಿಕೆಟ್‌ನಲ್ಲಿ ಹೊಸ ಬಿರುಗಾಳಿ ಎಬ್ಬಿಸಿಕೊಂಡು ಅಜರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ತಮ್ಮ ಮೊದಲ ಮೂರು ಟೆಸ್ಟ್‌ಗಳಲ್ಲಿ ಶತಕ ಗಳಿಸಿ ವಿಶ್ವದಾಖಲೆ ನಿರ್ಮಿಸಿದ್ದರು.

ಮೋಸದಾಟ ಪ್ರಕರಣ ಅಜರ್ ಜೀವನದಲ್ಲಿ ಎಂದೆಂದಿಗೂ ಕಪ್ಪು ಚುಕ್ಕೆಯಾಗಿ ಉಳಿದುಕೊಳ್ಳಬಹುದು. ಇದೀಗ 'ನಿರಪರಾಧಿ' ಎಂಬುದು ಸಾಬೀತಾದರೂ ಅವರಿಗೆ ಈ ಕಳಂಕದಿಂದ ಪೂರ್ಣವಾಗಿ ಹೊರಬರಲು ಸಾಧ್ಯವಿಲ್ಲ. ಕಳೆದ 12 ವರ್ಷಗಳಲ್ಲಿ ಸಾಕಷ್ಟು ನೋವು ಅನುಭವಿಸಿದ್ದಾರೆ. ಆದರೆ ಎಲ್ಲವೂ 'ವಿಧಿಬರಹ' ಎಂದಿರುವ ಅಜರ್, 'ನನಗೆ ಒದಗಿದ ಪರಿಸ್ಥಿತಿಗೆ ಯಾರನ್ನೂ ದೂಷಿಸುವುದಿಲ್ಲ' ಎಂದಿದ್ದಾರೆ.

ಆಜೀವ ನಿಷೇಧ ಶಿಕ್ಷೆಯಿಂದ ಹೊರಬಂದಿರುವ ಅಜರ್ ರಾಜಕೀಯದಲ್ಲೇ ಮುಂದುವರಿಯುವರೇ ಅಥವಾ ಜೀವನದ ಇನ್ನುಳಿದ ಅವಧಿಯನ್ನು ಕ್ರಿಕೆಟ್‌ನ ಸೇವೆಗೆ ಮೀಸಲಿಡುವರೇ ಎಂಬುದನ್ನು ನೋಡಬೇಕು. 'ನನ್ನ ಪ್ರತಿಭೆಯನ್ನು ಎಳೆಯರಿಗೆ ಧಾರೆ ಎರೆಯುವ ಬಗ್ಗೆ ಆಲೋಚಿಸುತ್ತಿದ್ದೇನೆ' ಎಂಬ ಮಾತು ಅವರ ಕಡೆಯಿಂದ ಬಂದಿದೆ.

ಪೂರ್ಣ ಪ್ರಮಾಣದಲ್ಲಿ ರಾಜಕೀಯದಲ್ಲಿ ತೊಡಗಿರುವ ಕಾರಣ ಅಜರ್‌ಗೆ ಮತ್ತೆ ಕ್ರಿಕೆಟ್ ಕ್ಷೇತ್ರಕ್ಕೆ ಬರುವುದು ಅಷ್ಟು ಸುಲಭವಲ್ಲ. ಆದರೆ ಮೋಸದಾಟದ ಕಳಂಕದಿಂದ ಹೊರಬರಲು ಸಾಧ್ಯವಾಗಿರುವುದು ಅವರಿಗೆ ದೊರೆತ ಗೆಲುವು. ಅದೇ ರೀತಿ ಮಾಜಿ ಆಟಗಾರನೊಬ್ಬನಿಗೆ ಕ್ರಿಕೆಟ್ ಮಂಡಳಿಯಿಂದ ದೊರೆಯುತ್ತಿರುವ ಎಲ್ಲ ಸೌಲಭ್ಯಗಳನ್ನು ಪಡೆಯಲು ಈ ತೀರ್ಪು ಹಾದಿಯೊದಗಿಸಿದೆ. ■